**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 01-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 1858-11

CW-20 PW-11

ಸಾಕ್ಷಿದಾರರ ಹೆಸರು - ಮಾರುತಿ ಭೀಮಪ್ಪಾ ಗುಜನಾಳ

ವಯಸ್ಸು - 65 ವರ್ಷ

ಉದ್ಯೋಗ - ನಿವೃತ್ತ ಪಿ ಎಸ್ ಐ

ಸಾಕೀನ - ಬೆಳಗಾವಿ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು ಫೆಬ್ರುವರಿ 2011 ರಿಂದ ಆಗಸ್ಟ 2011 ರ ವರೆಗೆ ಘಟಪ್ರಭಾ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 12-06-2011 ರಂದು ನಾನು ಚಾಸಾ 23 ರವರ ಆದೇಶದ ಮೇರೆಗೆ ಪ್ರಸ್ತುತ ಪ್ರಕರಣದ ಆರೋಪಿಗಳ ತಪಾಸಣೆಯಲ್ಲಿದ್ದಾಗ 1 ನೇ ಆರೋಪಿ ಘಟಪ್ರಭಾ ವೃತ್ತದ ಹತ್ತಿರ ಸಿಕ್ಕಿದ್ದು, ಆತನನ್ನು ವಿಚಾರಿಸಿದಾಗ ಪ್ರಸ್ತುತ ಪ್ರಕರಣದ ಗುನ್ನೆಯನ್ನು ಮಾಡಿರುವುದಾಗಿ ಒಪ್ಪಿಕೊಂಡಿದ್ದರಿಂದ, ಅವನನ್ನು ಬೆಳಿಗ್ಗೆ 10-00 ಗಂಟೆಗೆ ಕರೆದುಕೊಂಡು ಠಾಣೆಗೆ 11-00 ಗಂಟೆಗೆ ತಲುಪಿ ಚಾಸಾ 23 ರವರು ಮುಂದೆ ಹಾಜರುಪಡಿಸಿರುತ್ತೇನೆ. ಈ ಕುರಿತು ವರದಿ ನೀಡಿರುತ್ತೇನೆ.

ಸಾಕ್ಷಿ ದಿಃ 12-06-2011 ರ ವರದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-19 ಎಂದು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ 1 ಮತ್ತು 2 ರ ಪರ ವಕೀಲರಿಂದಃ**

1) ನಾನು 1 ನೇ ಆರೋಪಿಯನ್ನು ಪತ್ತೆ ಮಾಡಿದ ದಿನ ಪಿ ಎಸ್ ಐ ಆಗಿ ಘಟಪ್ರಭಾಗ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. 1ನೇ ಆರೋಪಿಯನ್ನು ಪತ್ತೆ ಮಾಡುವ ಮೊದಲು ನನಗೆ ಅವರ ಪರಿಚಯ ಇರಲಿಲ್ಲ. 1 ನೇ ಆರೋಪಿಯನ್ನು ಪತ್ತೆ ಹಚ್ಚಿದಾಗ ಅವರಿಂದ ಅವರ ಗುರುತಿನ ಚೀಟಿಯನ್ನು ಪಡೆದಿರುವುದಿಲ್ಲ. ಚಾಸಾ 23 ರವರು ಆರೋಪಿಯ ಪತ್ತೆಗಾಗಿ ನನಗೆ ನೀಡಿದ ಮೆಮೊ ಪ್ರತಿಯನ್ನು ನಾನು ನಿಪಿ-19 ರ ಜೊತೆ ಸಲ್ಲಿಸಿರುವುದಿಲ್ಲ. 1 ನೇ ಆರೋಪಿ ನನ್ನನ್ನು ನೋಡಿ ಅನುಮಾನಾಸ್ಪದವಾಗಿ ವರ್ತಿಸಿದ್ದರಿಂದ ಸಂಶಯ ಬಂದು ಅವರನ್ನು ವಿಚಾರಿಸಿರುತ್ತೇನೆ. ಸಾಮಾನ್ಯವಾಗಿ ಪಿ ಎಸ್ ಐ ಶ್ರೇಣಿಯ ಪೋಲಿಸರು ಆರೋಪಿಯನ್ನು ದಸ್ತಗೀರ ಮಾಡುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಪ್ರರಕಣಕ್ಕೂ ಸಂಬಂಧವಿಲ್ಲದಿದ್ದರೂ ಅವರನ್ನು ಜಬರದಸ್ತಿಯಿಂದ ಪ್ರಕರಣದಲ್ಲಿ ಸೇರಿಸಲು, ಆರೋಪಿ ಒಪ್ಪಿಕೊಂಡಿರದಿದ್ದರೂ, ಒಪ್ಪಿಕೊಂಡಿರುತ್ತಾರೆ ಎಂದು ಸುಳ್ಳು ಮಾಹಿತಿ ನೀಡಿ , ಹಾಜರು ಪಡಿಸಿ, ವರದಿ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.